
ವಿದ್ಯಾವರ್ಧಕ ಸಂಘ ®
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
ಶೇಷಾದ್ರಿ ಅಯ್ಯರ್ ರಸ್ತೆ, ಮೈಸೂರು
राष्ट्रीय सेवा योजना
NATIONAL SERVICE SCHEME
ಐ.ಕ್ಯೂ.ಎ.ಸಿ ,ಚುನಾವಣಾ ಸಾಕ್ಷರತಾ ಕ್ಲಬ್, ರಾಜ್ಯಶಾಸ್ತ್ರ ವಿಭಾಗ ಮತ್ತು ರಾ.ಸೇ.ಯೋ ವತಿಯಿಂದ
ಅಂತರ-ರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ
(International Day of Democracy)
NO
YES
NO
YES
Democracy
ಮುಖ್ಯ ಅತಿಥಿಗಳು : ಪ್ರೊ.ಹೆಚ್.ಎಸ್. ಶಿವಕುಮಾರ್
ಸಹಾಯಕ ಪ್ರಾಧ್ಯಾಪಕರು
ವಿದ್ಯಾವರ್ಧಕ ಕಾನೂನು ಕಾಲೇಜು
ಮೈಸೂರು
ಅಧ್ಯಕ್ಷತೆ : ಡಾ. ಎಸ್. ಮರೀಗೌಡ
ಪ್ರಾಂಶುಪಾಲರು
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
ಉಪಸ್ಥಿತಿ : ಡಾ.ರಘು.ಬಿ.ಟಿ
ಮುಖ್ಯಸ್ಥರು
ರಾಜ್ಯಶಾಸ್ತ್ರ ವಿಭಾಗ
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
ಸರ್ವರಿಗೂ ಸುಸ್ವಾಗತ
ಬೋಧಕರು, ಬೋಧಕೇತರರು ಹಾಗೂ ವಿದ್ಯಾರ್ಥಿ ಸಮುದಾಯ
ದಿನಾಂಕ:15.09.2023 ನೇ ಶುಕ್ರವಾರ
ಸಮಯ: ಬೆಳಿಗ್ಗೆ 11. 00 ಗಂಟೆ

## 15-09-2023



## ಅಂಬೇಡ್ಕರ್ ಪರಿಶ್ರಮ ದೇಶದ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಕಟ್ಟಲು, ರಕ್ಷಿಸಲು ಸಹಾಯಕವಾಗಿದೆ

ದಿನಾಂಕ:15.09.2023ರಂದು ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಐಕ್ಯೂಎಸಿ ಘಟಕ, ಚುನಾವಣಾ ಸಾಕ್ಷರತಾ ಕ್ಲಬ್, ರಾಸೇ.ಯೋ ಘಟಕ ಮತ್ತು ರಾಜ್ಯಶಾಸ್ತ್ರ ವಿಭಾಗದ ವತಿಯಿಂದ "ಅಂತರರಾಷ್ಟ್ರೀಯ ಪ್ರಜಾ ಪ್ರಭುತ್ವ ದಿನಾಚರಣೆ"ಯನ್ನು ಅತ್ಯಂತ ಅರ್ಥಪೂರ್ಣ ನೆಲೆಯಲ್ಲಿ ಆಚರಿಸಲಾಯಿತು. ವಿದ್ಯಾವರ್ಧಕ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಪ್ರೊ.ಹೆಚ್.ಎಸ್.ಶಿವಕುಮಾರ್ ಅವರು ಕಾರ್ಯಕ್ರಮವನ್ನು ಗಿಡಕ್ಕೆ ನೀರೆರೆಯುವುದರ ಮುಖೇನ ಉದ್ಘಾಟಿಸಿ, ಭಾರತದ ಪ್ರಜಾಪ್ರಭುತ್ವ ಸರ್ವರನ್ನು ಒಳಗೊಂಡಿದ್ದು ಪ್ರತಿಯೊಬ್ಬರ ಒಳಿತಿಗಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಅಭಿಪ್ರಾಯಪಟ್ಟರು.

ವಿಶ್ವಸಂಸ್ಥೆಯ ಸಾಮಾನ್ಯ ಸಭೆ 2007ರಲ್ಲಿ ಪ್ರತಿವರ್ಷ ಸೆಪ್ಟೆಂಬರ್ 15ರಂದು ಪ್ರಜಾಪ್ರಭುತ್ವ ದಿನವನ್ನು ಆಚರಿಸಲು ತೀರ್ಮಾನಿಸಲಾಯಿತು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರೂ ತಮ್ಮ ಹಕ್ಕುಗಳನ್ನು ಅನುಭವಿಸುತ್ತಾರೆ, ಹೋರಾಡುತ್ತಾರೆ ಆದರೆ ಕರ್ತವ್ಯಗಳ ಬಗೆಗೆ ನಿರ್ಲಕ್ಷ್ಯ ತಾಳುತ್ತಾರೆ. ಪ್ರಜಾತಂತ್ರ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದೇ ನಮಗೆ ಸವಾಲಾಗಿದೆ. ಭಾರತದ ಸಂವಿಧಾನ ಜಗತ್ತಿನ ಶ್ರೇಷ್ಠ ಸಂವಿಧಾನ ಆಗಿದ್ದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ರಕ್ಷಿಸುತ್ತದೆ. ಸಂವಿಧಾನ ರಚಿಸಿದ ಶ್ರಮವಹಿಸಿದ ಅನೇಕ ಮಹಾನ್ ವ್ಯಕ್ತಿಗಳನ್ನು ನೆನೆಯಬೇಕು. ಡಾ.ಬಿ.ಆರ್.ಅಂಬೇಡ್ಕರ್‌ರವರ ಪರಿಶ್ರಮ ದೇಶದ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಕಟ್ಟಲು, ರಕ್ಷಿಸಲು ಸಹಾಯಕವಾಗಿದೆ. ಭಾರತದ ಸಂವಿಧಾನ ರಚಿಸುವ ಸಂದರ್ಭದಲ್ಲಿ ರಚನಾಕಾರರು ಅನೇಕ ಸವಾಲುಗಳನ್ನು ಎದುರಿಸುತ್ತಾರೆ ಆದರೂ ಭಾರತೀಯರು ಜಗತ್ತಿನಲ್ಲೇ ಶ್ರೇಷ್ಠ ಸುಭದ್ರವಾದ ಸಂವಿಧಾನ ರಚನೆ ಮಾಡಿದರು.

ಭಾರತೀಯ ಸಂವಿಧಾನದ ಮೌಲ್ಯ ಎಂದಿಗೂ ಶಾಶ್ವತವಾಗಿರುತ್ತದೆ. ಸರ್ವರನ್ನು ಒಳಗೊಳ್ಳುವ ವ್ಯವಸ್ಥೆಯನ್ನು ನಮ್ಮ ಸಂವಿಧಾನ ರೂಪಿಸಿದೆ. ಭಾರತದಲ್ಲಿ ಪ್ರತಿಯೊಂದು ಹಂತದ ಸರ್ಕಾರವನ್ನು ಜನರೇ ಆರಿಸುವಂಥ ವ್ಯವಸ್ಥೆ ಇದೆ. ರಾಜ್ಯದ ಪರಮಾಧಿಕಾರವನ್ನು ಗೌರವಿಸಿ ಪ್ರತಿಯೊಬ್ಬ ಪ್ರಜೆಯೂ ಕಾನೂನುಗಳನ್ನು ಗೌರವಿಸಿ ಅನುಸರಿಸಬೇಕಾಗುತ್ತದೆ. ಸಮ-ಸಮಾಜವನ್ನು ನಿರ್ಮಿಸುವ ಗುರಿಯನ್ನು ಸಂವಿಧಾನ ಹೊಂದಿದೆ. ರಾಜ್ಯದ ಆಡಳಿತದಲ್ಲಿ ಧರ್ಮ ಮತ್ತು ಜಾತಿಯನ್ನು ದೂರವಿಡಬೇಕು. ಭಾರತದ ಪ್ರಜಾಪ್ರಭುತ್ವದಲ್ಲಿ ಯಾವುದೇ ತಾರತಮ್ಯವಿಲ್ಲದೆ ಪ್ರತಿಯೊಬ್ಬರಿಗೂ ಸಮಾನ ಹಕ್ಕು ಮತ್ತು ನಿಯಮವನ್ನು ನೀಡಲಾಗಿದೆ. ಪ್ರತಿಯೊಬ್ಬರಿಗೂ ಸರ್ಕಾರ ಸಮಾನ ಮತ್ತು ಉಚಿತ ನ್ಯಾಯದ ವ್ಯವಸ್ಥೆ ಕಲ್ಪಿಸಬೇಕು. ಭಾರತೀಯ ನ್ಯಾಯ ವ್ಯವಸ್ಥೆಯು ದುರ್ಬಲರಿಗೆ ಸಮಾನ ನ್ಯಾಯ ನೀಡುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾದಾಗ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆ ಬಲಯುತವಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯು ಮೂಲಭೂತ ಕರ್ತವ್ಯಗಳನ್ನು ಪರಿಶೀಲಿಸದಾಗ ಸಮಾಜ, ದೇಶದಲ್ಲಿ ಯಾವುದೇ ಸಮಸ್ಯೆಗಳು ಉದ್ಭವಿಸುವುದಿಲ್ಲ.

ಸಮಾರಂಭದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡರು ವಹಿಸಿದ್ದು ಪ್ರಜಾಪ್ರಭುತ್ವದ ಮಹತ್ವ ಮತ್ತು ಮೌಲ್ಯಗಳನ್ನು ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿಯ ಅರಿವು ಮೂಡಿಸುವ ನುಡಿಗಳನ್ನಾಡಿದರು. ತದನಂತರ ಕಾಲೇಜಿನ ಬಯಲು ರಂಗಮಂಟಪದಲ್ಲಿ ಪ್ರಾಚಾರ್ಯರು ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳಿಗೆ ಸಂವಿಧಾನ ಪೀಠಿಕೆಯನ್ನು ಬೋಧಿಸಿದರು. ರಾಜ್ಯಶಾಸ್ತ್ರದ ವಿಭಾಗದ ಮುಖ್ಯಸ್ಥರಾದ ಡಾ.ಬಿ.ಟಿ.ರಘು ಅತಿಥಿಗಳ ಪರಿಚಯದೊಂದಿಗೆ ಸ್ವಾಗತಿಸಿದರೆ, ಪ್ರೊ.ಮೋಹನ್‌ಕುಮಾರ್ ವಂದಿಸಿದರು. ಅಧ್ಯಾಪಕ ಸಲಹೆಗಾರರಾದ ಪ್ರೊ.ಪಲ್ಲವಿ.ಡಿ ಅವರು ನಿರೂಪಿಸಿದರು.


(International Day of Democracy)






(International Day of Democracy)














(International Day of Democracy)
















VIDYAVARDHAKA LAW COLLEGE


VIDYAVARDHAKA LAW COLLEGE
NSS OFFICE


VIDYAVARDHAKA LAW COLLEGE
PARKING


VIDYAVARDHAKA FIRST GRADE COLLEGE




VIDYAVARDHAKA FIRST GRADE COLLEGE

